21 (13) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಜಮಖಂಡಿ ತಾಲ್ಲೂಕಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಾಯ್ದಿರಿಸಿರುವ ಒಟ್ಟು ಅರಣ್ಯ ಪ್ರದೇಶವೆಷ್ಟು (ಸಂಪೂರ್ಣ ವಿವರ ಒದಗಿಸುವುದು) ,

ಆ) ಈ ಒಟ್ಟು ದಾಖಲಾತಿ ಅರಣ್ಯದಲ್ಲಿ ಒತ್ತುವರಿಯಾದ ಅರಣ್ಯ ಪ್ರದೇಶವೆಷ್ಟು ,

ಇ) ಒತ್ತುವರಿಗೆ ಕಾರಣ ಮತ್ತು ಪುನಃ ಈ ಒತ್ತುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಯೋಜನೆ ಸರ್ಕಾರದ ಆಲೋಚನೆ ಯಲ್ಲಿದೆಯೇ ,

ಈ) ಹಾಗಿದ್ದಲ್ಲಿ, ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ ,

ಉ) ಸದರಿ ತಾಲ್ಲೂಕಿನಲ್ಲಿ ದಿನಾಂಕ 01 04 02 ರಿಂದ ಈವರೆವಿಗೂ ಅರಣ್ಯ ಬೆಳೆಸಲು ಸರ್ಕಾರದಿಂದ ಖರ್ಚಾದ ಒಟ್ಟು ಹಣವೆಷ್ಟು ಹಾಗೂ ಒಂದು ಸಸಿಯನ್ನು ಮರವಾಗಿ ಬೆಳೆಸಲು ಖರ್ಚಾಗುವ ಹಣವೆಷ್ಟು (ವಿವರ ಒದಗಿಸುವುದು) ,

ಊ) ಈ ತಾಲ್ಲೂಕಿನಲ್ಲಿ ಅರಣ್ಯೀಕರಣಗೊಳಿಸಿರುವ ಪ್ರದೇಶವೆಷ್ಟು , ಎಷ್ಟು ಗಿಡಗಳನ್ನು ನೆಡಲಾಗಿದೆ ಮತ್ತು ಅವುಗಳ ಸಂರಕ್ಷಣೆಗೆ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ

ಶ್ರೀ ಸಿ ಚನ್ನಿಗಪ್ಪ (ಅರಣ್ಯ ಸಚಿವರು)

ಅ)

	ಬೀಟ್	ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ
1	ಜಮಖಂಡಿ	2017 93
2	ಕುಂಚನೂರ	1611 27
3	ಸಿದ್ದಾಪುರ	2019 76
4	ಕುಳ್ಳಳ್ಳಿ	1839 99
5	ಸಾವಳಗಿ	1184 01
6	ತುಂಗಳ	724 31
7	ಬನಹಟ್ಟಿ	1085 00
8	ತೇರದಾಳ	334 55
	ಒಟ್ಟು	10816 82

ಆ) ಒತ್ತುವರಿಯಾದ ಅರಣ್ಯ ಪ್ರದೇಶ 299 67 ಹೆಕ್ಟೇರು

ಇ) 1978ರ ಪೂರ್ವದಲ್ಲಿ ಆದ ಅರಣ್ಯ ಒತ್ತುವರಿವನ್ನು ಸರ್ಕಾರದ ಆದೇಶ ಸಂಖ್ಯೆ ಅಪಜೀ 05 ಎಫ್‌ಜೆಎಲ್ 90, ದಿನಾಂಕ 05 05 1997 ರ ಪ್ರಕಾರ ಪರಿಶೀಲಿಸಿ ಸಕ್ರಮಗೊಳಿಸಲು ಯೋಗ್ಯವಾಗಿರುವ ಪ್ರಕರಣಗಳನ್ನು ಸಕ್ರಮಗೊಳಿಸಲಾಗುತ್ತಿದೆ ಉಳಿದ ಪ್ರಕರಣಗಳಲ್ಲಿ ಅರಣ್ಯ ಕಾಯ್ದೆ 1963ರ ಪ್ರಕಾರ ಅನಧಿಕೃತ ಒತ್ತುವರಿ ತೆರವುಗೊಳಿಸಿ ಅರಣ್ಯ ಭೂಮಿಯನ್ನು ಇಲಾಖೆಯ ವಶಕ್ಕೆ ತೆಗೆದುಕೊಳ್ಳಲು ಕ್ರಮವಹಿಸಲಾಗುತ್ತಿದೆ

ಈ) ಈ ಮೇಲಿನಂತೆ ಕ್ರಮ ವಹಿಸಲಾಗುತ್ತಿದೆ

ಉ)

ವರ್ಷ	ಖರ್ಚು (ರೂ)
2002–03	882574
2003–04	346700
2004–05	248710
2005–06	761720
2006–07	227096
ಒಟ್ಟು	2466800

ಒಂದು ಸಸಿಯನ್ನು ನೆಟ್ಟು ಮುಂದಿನ ಮೂರು ವರ್ಷಗಳವರೆಗೆ ಪೋಷಿಸಿ ಬೆಳೆಸಲು ಖರ್ಚಾಗುವ ಅಂದಾಜು ಹಣ ಈ ಕೆಳಗಿನಂತಿದೆ, ನೆಡುತೋಪುಗಳಲ್ಲಿ ಬೆಳೆಸಿದ ಸಸಿಗೆ ರೂ 54/– ರಸ್ತೆ ಬದಿಯಲ್ಲಿ ಬೆಳೆಸಿದ ಸಸಿಗೆ ರೂ 328/– (ರಕ್ಷಾ ಕವಚ ಮತ್ತು ನೀರು ಉಣಿಸುವ ಖರ್ಚು ಇತ್ಯಾದಿ ಸೇರಿ)

ಊ) ಈ ತಾಲ್ಲೂಕಿನಲ್ಲಿ 01 04 2002 ರಿಂದ ಇಲ್ಲಿಯವರೆಗೆ ಒಟ್ಟು 284 39 ಹೆಕ್ಟೇರು ಪ್ರದೇಶದಲ್ಲಿ 191600 ಸಸಿಗಳನ್ನು ನೆಡಲಾಗಿದೆ ಸದರಿ ಸಸಿಗಳ ರಕ್ಷಣೆಗೆ ನೆಟ್ಟ ವರ್ಷದಿಂದ ಮುಂದಿನ ಮೂರು ವರ್ಷಗಳವರೆಗೆ ಕಾವಲುಗಾರರನ್ನು ನೇಮಿಸಿ, ಸಂರಕ್ಷಣಾ ಕ್ರಮ ಕೈಗೊಳ್ಳಲಾಗುತ್ತಿದೆ

22 (47) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಕೆರೆಗಳ ಸಂಖ್ಯೆ ಹಾಗೂ ಅವುಗಳ ನೀರಿನ ಸಾಮರ್ಥ್ಯ ಎಷ್ಟು , (ಕೆರೆವಾರು ವಿವರ ನೀಡುವುದು)